

ವೀರಂ ಸಿನಿಮಾದ ದೃಶ್ಯ

ಭೂಗತ ಕಥನದಲ್ಲಿ ಶಿವರಾಜ್‌ಕುಮಾರ್ ಹಾಗೂ ಸುದೀಪ್ ಮುಖ ಕಾಣಿಸಿದ್ದರಿಂದಾಗಿ ಚಿತ್ರಕ್ಕೆ ಹೆಚ್ಚಿನ ಉಪಯೋಗವೇನೂ ಆಗಲಿಲ್ಲ. ದರ್ಶನ್‌ರ 'ಕ್ರಾಂತಿ' (ನಿ: ವಿ. ಹರಿಕೃಷ್ಣ) ನಿರೀಕ್ಷಿತ ಗೆಲುವು ದಾಖಲಿಸಲಿಲ್ಲ. ಹೇಮಂತ ರಾವ್ ನಿರ್ದೇಶನದ 'ಸಪ್ತ ಸಾಗರದಾಚೆ ಎಲ್ಲೋ' ಶೀರ್ಷಿಕೆಯ 'ಸೈಡ್ ಎ' ಮತ್ತು 'ಸೈಡ್ ಬಿ' ಸಿನಿಮಾಗಳು ಸದಭಿರುಚಿಯ ಕಾರಣದಿಂದಾಗಿ ಹಾಗೂ ನಾಯಕ ನಟ ರಕ್ಷಿತ್ ಶೆಟ್ಟಿ ವರ್ಚಸ್ಸಿನ ಕಾರಣದಿಂದಾಗಿ ಸಹೃದಯರ ಗಮನಸೆಳೆದರೂ, ಆ ಆಕರ್ಷಣೆ ದೊಡ್ಡ ಗೆಲುವಾಗಿ ಪರಿವರ್ತಿತವಾಗಲಿಲ್ಲ. ಶಿವರಾಜ್‌ಕುಮಾರ್ ನಟನೆಯ 'ಘೋಸ್ಟ್' ಸಿನಿಮಾ ಸಮಾಧಾನಕರ ಯಶಸ್ಸು ಗಳಿಸಿತಾದರೂ, ಅದಕ್ಕಿಂತಲೂ ಅವರು ಅತಿಥಿ ನಟನಾಗಿ ನಟಿಸಿದ್ದ 'ಜೈಲರ್' ತಮಿಳು ಸಿನಿಮಾ ಹೆಚ್ಚು ಸದ್ದು–ಸುದ್ದಿ ಮಾಡಿತು. ರಜನಿಕಾಂತ್ ನಾಯಕರಾಗಿ ನಟಿಸಿರುವ 'ಜೈಲರ್' ಸಿನಿಮಾದಲ್ಲಿ ಕೆಲವೇ ಕ್ಷಣಗಳ, ಒಂದೆರಡು ದೃಶ್ಯಗಳಲ್ಲಷ್ಟೇ ಶಿವರಾಜ್ ಕಾಣಿಸಿಕೊಂಡರೂ, ಆ ಪಾತ್ರ ಚಿತ್ರರಸಿಕರ ಗಮನಸೆಳೆಯಿತು; ಅದರಿಂದಾಗಿ ಶಿವರಾಜ್ ಕನ್ನಡೇತರ ಸಿನಿಮಾಗಳಲ್ಲಿ ನಟಿಸುವ ಉತ್ಸಾಹವನ್ನೂ ತೋರುವಂತಾಯಿತು. 'ಕ್ಯಾಪ್ಟನ್ ಮಿಲ್ಲರ್' ತಮಿಳು ಸಿನಿಮಾದಲ್ಲಿ ಧನುಶ್ ಜೊತೆ ಶಿವರಾಜ್ ನಟಿಸಿದ್ದು, ಚಿತ್ರದ ಪೋಸ್ಟರ್‌ಗಳು ಚಿತ್ರರಸಿಕರ ಗಮನಸೆಳೆದಿವೆ. ರಾಮಚರಣ್ ತೇಜ ಅವರೊಂದಿಗೆ ತೆಲುಗು ಚಿತ್ರವೊಂದರಲ್ಲಿ ಕೂಡ ಶಿವರಾಜ್ ನಟಿಸಲು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಕನ್ನಡ ಚಿತ್ರಗಳಿಗೆ ಹಾಗೂ ಕನ್ನಡ ಕಥೆಗಳಿಗಷ್ಟೇ ತನ್ನನ್ನು ಸೀಮಿತಗೊಳಿಸಿಕೊಂಡಿದ್ದ ಶಿವರಾಜ್, ಬದಲಾದ ಕಾಲಘಟ್ಟದಲ್ಲಿ ಕನ್ನಡದಾಚೆಗೂ ತಮ್ಮನ್ನು ತೆರೆದುಕೊಂಡಿರುವುದು ಕುತೂಹಲಕರ.

ರಾಜ್ ಬಿ. ಶೆಟ್ಟಿ ಅವರ ನಟನೆಯ 'ಟೋಬಿ' (ನಿ: ಬಾಸಿಲ್ ಅಲ್ಚಲಕ್ಕಲ್) ಸಿನಿಮಾಕ್ಕಿಂತಲೂ ಅದರ ಪೋಸ್ಟರ್ ಹೆಚ್ಚಿನ ಗಮನಸೆಳೆಯುವಂತಿತ್ತು. ಆದರೆ, ವರ್ಷದ ಕೊನೆಯ ಭಾಗದಲ್ಲಿ ತೆರೆಕಂಡ, ರಾಜ್ ಶೆಟ್ಟಿ ನಟನೆ–ನಿರ್ದೇಶನದ 'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾ ಭಾವಗೀತೆಯಂತೆ ಸಹೃದಯರ ಗಮನಸೆಳೆಯಿತಾದರೂ, ಯಶಸ್ಸಿನ ರುಚಿಯನ್ನೇನೂ ಕಾಣಲಿಲ್ಲ. ಕ್ರೌರ್ಯದ ಕಥನಗಳಿಂದ ನೋಡುಗರ ಮನಸ್ಸನ್ನು ಕ್ಷೋಭೆಗೊಳಿಸಬಲ್ಲ ರಾಜ್, ಭಾವಗೀತೆಯಂಥ ಕಥನಗಳ ಮೂಲಕ ಸಹೃದಯರ ಮನಸ್ಸುಗಳನ್ನು ಆರ್ದ್ರಗೊಳಿಸಲೂ ಬಲ್ಲರು ಎನ್ನುವುದಕ್ಕೆ 2023ರಲ್ಲಿ ತೆರೆಕಂಡ ಅವರ ಎರಡು ಸಿನಿಮಾಗಳು ಉದಾಹರಣೆಯಂತಿವೆ. ನಟಿ ರಮ್ಯಾ ನಿರ್ಮಾಪಕಿಯಾಗಿ ಚಿತ್ರೋದ್ಯಮದಲ್ಲಿ ಮರಳಿ ಸಕ್ರಿಯರಾದುದಕ್ಕೆ ಕಾರಣವಾದುದು 'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾದ ಮತ್ತೊಂದು ವಿಶೇಷ.

ಕಿರುತೆರೆಯ 'ಬಿಗ್ ಬಾಸ್' ಖ್ಯಾತಿಯ ಪ್ರಥಮ್ ನಟನೆಯ 'ನಟ ಭಯಂಕರ' ಹಾಗೂ ಶ್ರೀನಗರ ಕಿಟ್ಟಿ ನಟನೆಯ 'ಗೌಳಿ' ಸಿನಿಮಾಗಳು ತೆರೆಕಾಣುವಾಗಲಷ್ಟೇ ಸುದ್ದಿ ಮಾಡಿದವು.

ಸಂತೋಷ್ ಆನಂದರಾಮ್ ನಿರ್ದೇಶನದ 'ರಾಘವೇಂದ್ರ ಸ್ಟೋರ್ಸ್', ವಿಜಯ್‌ಪ್ರಸಾದ್‌ರ 'ತೋತಾಪುರಿ: ಅಧ್ಯಾಯ 2', ಪ್ರೀತಂ ಗುಬ್ಬಿ ನಿರ್ದೇಶನದ 'ಬಾನದಾರಿಯಲ್ಲಿ', ನಿತಿನ್ ಕೃಷ್ಣಮೂರ್ತಿ ನಿರ್ದೇಶನದ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ', ಉಮೇಶ್ ಕೆ. ಕೃಪಾ ನಿರ್ದೇಶನದ 'ಟಗರು ಪಲ್ಯ', ರಮೇಶ್ ಅರವಿಂದ್‌ರ 'ಶಿವಾಜಿ ಸುರತ್ಕಲ್ –2', ಶಶಾಂಕ್ ನಿರ್ದೇಶನದ 'ಕೌಸಲ್ಯಾ ಸುಪ್ರಜಾ ರಾಮ', ವಿಜಯ್ ನಾಗೇಂದ್ರ ನಿರ್ದೇಶನದ 'ಗುರುದೇವ್ ಹೊಯ್ಸಳ' ಸಿನಿಮಾಗಳು ಬೇರೆ ಬೇರೆ ಕಾರಣಗಳಿಗಾಗಿ ಗಮನಸೆಳೆದವು. ಜಗ್ಗೇಶ್ ಮುಖ್ಯಪಾತ್ರದಲ್ಲಿ ನಟಿಸಿದ್ದ 'ರಾಘವೇಂದ್ರ ಸ್ಟೋರ್ಸ್' ಹಾಗೂ 'ತೋತಾಪುರಿ–2' ಸಿನಿಮಾಗಳು ಆಶಯಗಳ ಕಾರಣದಿಂದ ಗಮನಸೆಳೆದವು. 'ಬಾನದಾರಿಯಲ್ಲಿ' ಸಿನಿಮಾ ಗಣೇಶ್‌ಗೆ ಯಶಸ್ಸು ತಂದುಕೊಡಲಿಲ್ಲ; 'ಮುಂಗಾರುಮಳೆ' ಮತ್ತೆ ನಿಜವಾಗಲಿಲ್ಲ. ಇದ್ದುದರಲ್ಲಿ ನಿತಿನ್‌ರ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಹಾಗೂ ಉಮೇಶ್‌ರ 'ಟಗರು ಪಲ್ಯ' ಸಿನಿಮಾಗಳು ಸಮಾಧಾನಕರ ಯಶಸ್ಸನ್ನು ಕಂಡವು, ಸಹೃದಯರ ಗಮನವನ್ನೂ ಸೆಳೆದವು. ಧನಂಜಯ್ ಮುಖ್ಯಪಾತ್ರದಲ್ಲಿದ್ದ 'ಗುರುದೇವ್ ಹೊಯ್ಸಳ' ಕೂಡ ನಿರೀಕ್ಷಿತ ಯಶಸ್ಸನ್ನು ಸಾಧಿಸಲಿಲ್ಲ.

ಕಲಾತ್ಮಕ ವ್ಯಾಕರಣದ ದೃಷ್ಟಿಯಿಂದ ಗಮನಸೆಳೆಯುವಂತಹ ಕೆಲವು ಸಿನಿಮಾಗಳು 2023ರಲ್ಲಿ ತೆರೆಕಂಡವು. ಪೃಥ್ವಿ ಕೊಣನೂರು ನಿರ್ದೇಶನದ 'ಪಿಂಕಿ ಎಲ್ಲಿ?' ಹಾಗೂ ಬೆಸಗರಹಳ್ಳಿ ರಾಮಣ್ಣನವರ ಕಥೆಯನ್ನಾಧರಿಸಿ, ಕೃಷ್ಣೇಗೌಡರು ನಿರ್ದೇಶಿಸಿದ 'ನಾನು ಕುಸುಮ' ಸಿನಿಮಾಗಳು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡವು. 'ಪಿಂಕಿ ಎಲ್ಲಿ?' ಸಿನಿಮಾದ ಪೃಥ್ವಿ ಅವರ 'ರೈಲ್ವೆ ಚಿಲ್ಡ್ರನ್' ಕೂಡ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಸಹೃದಯರ ಮೆಚ್ಚುಗೆಗಳಿಸಿದ್ದ ಡಾಕ್ಯೂಕಥನ. ಅವರ ನಿರ್ದೇಶನದ 'ಹದಿನೇಳೆಂಟು' ಕೂಡ ಚಿತ್ರೋತ್ಸವಗಳ ಮೂಲಕ ಸುದ್ದಿಯಲ್ಲಿದೆ ಹಾಗೂ 2024ರಲ್ಲಿ ತೆರೆಕಾಣುವ ತವಕದಲ್ಲಿದೆ.

ಶಶಾಂಕ್ ಸೋಗಲ್ ನಿರ್ದೇಶನದ 'ಡೇರ್‌ಡೆವಿಲ್ ಮುಸ್ತಾಫಾ', ಸಿಂಧು ಶ್ರೀನಿವಾಸಮೂರ್ತಿ ನಟನೆ–ನಿರ್ದೇಶನದ 'ಆಚಾರ್ & ಕೋ.', ಸುನಿಲ್ ಮೈಸೂರು ನಿರ್ದೇಶನದ 'ಆರ್ಕೆಸ್ಟ್ರಾ ಮೈಸೂರು' ಸಿನಿಮಾಗಳು ಭಿನ್ನ ಕಥನಗಳ ಜೊತೆಗೆ, ಹೊಸ ಪ್ರತಿಭೆಗಳ ಕಾರಣದಿಂದಲೂ ಗಮನಸೆಳೆದ ಪ್ರಯತ್ನಗಳು. ಶಶಾಂಕ್‌ರ 'ಡೇರ್ ಡೆವಿಲ್ ಮುಸ್ತಫಾ' ಪೂರ್ಣಚಂದ್ರ ತೇಜಸ್ವಿ ಅವರ ಕಥೆಯನ್ನಾಧರಿಸಿರುವ ಸಿನಿಮಾ. ಸಿಂಧು ಅವರ 'ಆಚಾರ್ & ಕೋ.' ಸಿನಿಮಾ ದಶಕಗಳ ಹಿಂದಿನ ಬೆಂಗಳೂರನ್ನು ಪುನರ್ ನಿರ್ಮಿಸಿಕೊಂಡು, ಸಂಪ್ರದಾಯಸ್ಥ ಕುಟುಂಬದ ಹೆಣ್ಣುಮಕ್ಕಳ ಬದುಕಿನ ಏಳುಬೀಳುಗಳನ್ನು ಸೊಗಸಾಗಿ ನಿರೂಪಿಸಿರುವ ಪ್ರಯತ್ನ. ಮೈಸೂರಿನ ಭಾವಕೋಶದೊಂದಿಗೆ ಆರ್ಕೆಸ್ಟ್ರಾ ಸಂಸ್ಕೃತಿಯ ಕಥನವನ್ನು ಕಸಿಮಾಡಿದ 'ಆರ್ಕೆಸ್ಟ್ರಾ ಮೈಸೂರು' ಕೂಡ ಸಹೃದಯರ ಗಮನಸೆಳೆದಿತ್ತು. ಆದರೆ, ಈ ಯಾವ ಸಿನಿಮಾಗಳೂ ಯಶಸ್ಸಿನ ದೃಷ್ಟಿಯಿಂದ ಗಮನಾರ್ಹ ಸಾಧನೆಯನ್ನೇನೂ

ಟಗರು ಪಲ್ಯ ಸಿನಿಮಾದಲ್ಲಿ ನಾಗಭೂಷಣ್ ಹಾಗೂ ಅಮೃತಾ

